**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 100/2023**

| | | | |
|---|---|---|---|
| **ಹೆಸರು** | **:** | **ಮರ್ಗಪ್ಪ** | |
| **ತಂದೆಯ ಹೆಸರು** | **:** | **ತಿಪ್ಪಣ್ಣ** | **ಪ್ರಾ.ಸಾ.4** |
| **ವಯಸ್ಸು** | **:** | **39 ವರ್ಷ** | **ದಿನಾಂಕಃ 28-06-2024** |
| **ಉದ್ಯೋಗ** | **:** | **ಮುಖ್ಯ ಪೇದೆ** | |
| **ವಾಸಸ್ಥಳ** | **:** | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಖುದ್ದು ಸಾಕ್ಷಿಯಿಂದಃ</u>**

ದನಾಂಕ 17-04-2023 ರಿಂದ ಇಲ್ಲಿಯವರೆಗೆ ಸುಲೇಪೇಟ ಪೋಲಿಸ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ಆರೋಪಿಯಾದ ಮಹ್ಮದ ರಫಿಕ ತಂದೆ ಫತ್ರು ಸಾಬರವರ ವಿರುದ್ದ ಪ್ರೊಕ್ಲಾಮೇಷನ ಜಾರಿಯಾಗಿದ್ದು ಆದ್ದರಿಂದ ದಿನಾಂಕ 30-09-2023 ರಂದು ಪಂಚರಾದ ಆರೀಫ ಮತ್ತು ಶ್ರೀಕಂಠರವರ ಸಮಕ್ಷಮ ಪ್ರೊಕ್ಲಾಮೇಷನ ಪ್ರತಿಯನ್ನು ಸುಲೇಪೇಟಿನ ಬಡಕಲ್ ಏರಿಯಾದ ಅಂಗನವಾಡಿಗೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಸುಲೇಪೇಟ ಗ್ರಾಮ ಪಂಚನಾಯಿತಿಯಲ್ಲಿ ಅಂಟಿಸಲಾಯಿತು ಮತ್ತು ಇನ್ನೊಂದು ಪ್ರತಿಯನ್ನು ಸುಲೇಪೇಟ ಬಸ್ ನಿಲ್ದಾಣದಲ್ಲಿ ಅಂಟಿಸಲಾಯತು ಈ ರೀತಿ ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದ್ದೇನೆ. ಸಾಕ್ಷಿ ಜರುಗಿಸಿದ ಪ್ರೊಕ್ಲಾಮೇಷನ ಪಂಚನಾಮೆಯನ್ನು ನಿಪಿ-4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ್ದ ಪ್ರೊಕ್ಲಾಮೇಷನ ವರದಿಯನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**